ಓ.ಎಸ್. ನಂ. 49/2021
ಪಿ.ಡಬ್ಲ್ಯೂ- 1

(ಇಂದು ದಿಃ 10-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆ **:-** ಶ್ರೀ ಹೆಚ್ ಎಲ್ ಎ ವಕೀಲರಿಂದ **:-**

ನಾನು ವಾದಿ ಸಿದ್ದರಾಮಪ್ಪರವರ ಎಸ್ ಪಿ ಎ ಹೋಲ್ಡರ್ ಆಗಿರುತ್ತೇನೆ. ಸಿದ್ದರಾಮಪ್ಪ ನನ್ನ ತಂದೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರ ವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರ ಕ್ಕೆ ಸಹಿ ಮಾಡಿರುತ್ತೇನೆ.

ವಾದಿ ಸಾಕ್ಷಿಯ ಪರವಾಗಿ ಬರೆದುಕೊಟ್ಟಿರುವ ಎಸ್ ಪಿ ಎ ದಾಖಲಾತಿಯನ್ನು ನಿಪಿ-1 ಎಂದು, 12 ಕೈ ಪಹಣಿಗಳನ್ನು ನಿಪಿ 2 ರಿಂದ 13 ಎಂದು, ಮುಟೇಶನ್ ರಿಜಿಸ್ಟರನ್ನು ನಿಪಿ-14 ಎಂದು, ದಿಃ 12-06-2020 ರಂದು ತಹಶೀಲ್ದಾರ ಸೇಡಂರವರು ನೀಡಿದ ಹಿಂಬರಹವನ್ನು ನಿಪಿ 15 ಎಂದು, 3 ಪಹಣಿಗಳನ್ನು ನಿಪಿ 16 ರಿಂದ 18 ಎಂದು, ವಾದಿಯ ಆಧಾರ ಕಾರ್ಡಿನ ನಕಲನ್ನು ನಿಪಿ 19 ಎಂದು, ಸಾಕ್ಷಿಯ ಆಧಾರ ಕಾರ್ಡಿನ ನಕಲನ್ನು ನಿಪಿ 20 ಎಂದು ಗುರುತಿಸಲಾಯಿತು.

**(**ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ**.**